# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 553 (641) |
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್ |
| ಉತ್ತರಿಸಬೇಕಾದ ದಿನಾಂಕ | : | 09.03.2026 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಅಗಲಕೋಟೆ ಗ್ರಾಮದಲ್ಲಿ ಶಿಕ್ಷಣ ಇಲಾಖೆಗೆ ಸೇರಿದ ಜಾಗ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು); | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಟೇಕಲ್ ಮಾಲೂರು ತಾಲ್ಲೂಕು :<br><br>ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಟೇಕಲ್ ಹೋಬಳಿ, ಅಗಲಕೋಟೆ ಗ್ರಾಮದ ಸರ್ವೆ ನಂ:2, 7, 8, 10, 18, 60, 61, 63, 64 ರಲ್ಲಿನ ಒಟ್ಟು 50 ಎಕರೆ 26 ಗುಂಟೆ ಜಮೀನು ಶಾಲಾ ಶಿಕ್ಷಣ ಇಲಾಖೆಗೆ ಸೇರಿದ್ದು, ಸದರಿ ಗ್ರಾಮದ ಜಮೀನನ್ನು ಶಾಲೆಗೆ ದಾನವಾಗಿ ದಿನಾಂಕ:17.12.1935 ರಲ್ಲಿ ನೀಡಿರುತ್ತಾರೆ. |
| ಆ) | ಶಿಕ್ಷಣ ಇಲಾಖೆಗೆ ಸೇರಿದ ಜಾಗ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳಾವುವು; (ಸಂಪೂರ್ಣ ಮಾಹಿತಿ ನೀಡುವುದು); | ಬಂದಿದೆ.<br><br>ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಈ ಕಛೇರಿಯ ಸುತ್ತೋಲೆ ಸಂಖ್ಯೆ:DPICPI0ADM-2 (OTH)/3172024/2025-26 ದಿನಾಂಕ:15.07.2025 ರಲ್ಲಿ ರಾಜ್ಯದಲ್ಲಿ ಯಾವುದಾದರೂ ಸರ್ಕಾರಿ ಶಾಲಾ ಜಾಗ ಆಯಾ ಶಾಲಾ ಹೆಸರಿನಲ್ಲಿ ಖಾತೆಯಾಗದಿದ್ದಲ್ಲಿ, ಸದರಿ ಶಾಲೆ ಹೆಸರಿನಲ್ಲಿ ಖಾತೆ ಮಾಡಿಸಲು ಹಾಗೂ ಒಂದು ವೇಳೆ ಈ ಜಾಗ ಒತ್ತುವರಿಯಾಗಿದ್ದಲ್ಲಿ ಅದನ್ನು ತೆರವುಗೊಳಿಸಲು ನಿಯಮಾನುಸಾರ ಅಗತ್ಯ ಕ್ರಮಗಳನ್ನು ವಹಿಸುವಂತೆ ರಾಜ್ಯದ ಎಲ್ಲಾ ಜಿಲ್ಲಾಡಳಿತಗಳಿಗೆ ಮತ್ತು ಶಾಲಾ ಶಿಕ್ಷಣ ಇಲಾಖೆಯ ಸಂಬಂಧಿಸಿದ ಅಧಿಕಾರಿಗಳಿಗೆ ಈಗಾಗಲೇ ನಿರ್ದೇಶನಗಳನ್ನು ನೀಡಲಾಗಿದೆ.<br><br>ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಟೇಕಲ್ ಹೋಬಳಿ, ಅಗಲಕೋಟೆ ಗ್ರಾಮದಲ್ಲಿನ 50.26 ಎಕರೆ ಜಮೀನು ಶಾಲಾ ಶಿಕ್ಷಣ ಇಲಾಖೆಯ ಹೆಸರಿಗೆ ವರ್ಗಾವಣೆ ಮಾಡುವ ಬಗ್ಗೆ, ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ, ಮುಖ್ಯ ನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್, ಕೋಲಾರ ಜಿಲ್ಲೆ, ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿ, ಶಾಲಾ ಶಿಕ್ಷಣ ಇಲಾಖೆ, ಮಾಲೂರು ರವರಿಗೆ ದಿನಾಂಕ:02.02.2026 ರ ಸರ್ಕಾರದ ಪತ್ರದ ಮೂಲಕ ಸೂಚನೆ ನೀಡಲಾಗಿದೆ.<br><br>ಸರ್ಕಾರಿ ಶಾಲಾ ಜಾಗದ ಒತ್ತುವರಿಯನ್ನು ತೆರವುಗೊಳಿಸಲು ಉಪನಿರ್ದೇಶಕರು, ಕೋಲಾರ ಇವರು ದಿನಾಂಕ:29.01.2026 |

| | | |
|---|---|---|
| | | ಮತ್ತು 10.02.2026 ರಂದು ಜಿಲ್ಲಾಧಿಕಾರಿಗಳಿಗೆ ಹಾಗೂ ಸಂಬಂಧಿಸಿದ ಉಪವಿಭಾಗಧಿಕಾರಿಗಳಿಗೆ ಮತ್ತು ತಹಶೀಲ್ದಾರರವರಿಗೆ ಕ್ರಮವಹಿಸುವಂತೆ ತಿಳಿಸಿರುತ್ತಾರೆ. |
| ಇ) | ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಅಗಲಕೋಟೆ ಗ್ರಾಮದಲ್ಲಿ ಶಿಕ್ಷಣ ಇಲಾಖೆಗೆ ದಾನವಾಗಿ ಬಂದಂತಹ ಭೂಮಿ ಎಷ್ಟು; ಯಾರಿಂದ, ಯಾವ ವರ್ಷದಲ್ಲಿ ಎಷ್ಟು ಜಮೀನು ದಾನವಾಗಿ ಬಂದಿದೆ; (ಸಂಪೂರ್ಣ ಮಾಹಿತಿ ನೀಡುವುದು); | 1955 ನೇ ಇಸವಿಯಲ್ಲಿ ದಿನಾಂಕ:17.12.1955 ರಲ್ಲಿ ಶ್ರೀ ಶ್ರೀನಿವಾಸಲು ಎಂಬುವವರು ಶಾಲಾ ಶಿಕ್ಷಣ ಇಲಾಖೆಗೆ 50.26 ಎಕರೆ ಜಮೀನನ್ನು ದಾನವಾಗಿ ಉಪನೋಂದಣಾಧಿಕಾರಿಗಳು ಮಾಲೂರು ಕಛೇರಿಯಲ್ಲಿ ದಸ್ತಾವೇಜಿನ ನಂ:1785/55-56, ದಿನಾಂಕ:06.08.1955 ರಂದು ದಾನ ಪತ್ರ ಮಾಡಿಕೊಟ್ಟಿರುತ್ತಾರೆ. |
| ಈ) | ಶಿಕ್ಷಣ ಇಲಾಖೆಗೆ ದಾನವಾಗಿ ನೀಡಲಾದ ಭೂಮಿಯನ್ನು ಅತಿಕ್ರಮವಾಗಿ ಭೂಕಬಳಿಕೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು); | ಬಂದಿದೆ.<br><br>ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಈ ಕಛೇರಿಯ ಸುತ್ತೋಲೆ ಸಂಖ್ಯೆ:DPICPI0ADM-2 (OTH)/3172024/2025-26 ದಿನಾಂಕ:15.07.2025 ರಲ್ಲಿ ರಾಜ್ಯದಲ್ಲಿ ಯಾವುದಾದರೂ ಸರ್ಕಾರಿ ಶಾಲಾ ಜಾಗ ಆಯಾ ಶಾಲಾ ಹೆಸರಿನಲ್ಲಿ ಖಾತೆಯಾಗದಿದ್ದಲ್ಲಿ, ಸದರಿ ಶಾಲೆ ಹೆಸರಿನಲ್ಲಿ ಖಾತೆ ಮಾಡಿಸಲು ಹಾಗೂ ಒಂದು ವೇಳೆ ಈ ಜಾಗ ಒತ್ತುವರಿಯಾಗಿದ್ದಲ್ಲಿ ಅದನ್ನು ತೆರವುಗೊಳಿಸಲು ನಿಯಮಾನುಸಾರ ಅಗತ್ಯ ಕ್ರಮಗಳನ್ನು ವಹಿಸುವಂತೆ ರಾಜ್ಯದ ಎಲ್ಲಾ ಜಿಲ್ಲಾಡಳಿತಗಳಿಗೆ ಮತ್ತು ಶಾಲಾ ಶಿಕ್ಷಣ ಇಲಾಖೆಯ ಸಂಬಂಧಿಸಿದ ಅಧಿಕಾರಿಗಳಿಗೆ ಈಗಾಗಲೇ ನಿರ್ದೇಶನಗಳನ್ನು ನೀಡಲಾಗಿದೆ.<br><br>ಸರ್ಕಾರಿ ಶಾಲಾ ಜಾಗದ ಒತ್ತುವರಿಯನ್ನು ತೆರವುಗೊಳಿಸಲು ಉಪನಿರ್ದೇಶಕರು, ಕೋಲಾರ ಇವರು ದಿನಾಂಕ:29.01.2026 ಮತ್ತು 10.02.2026 ರಂದು ಜಿಲ್ಲಾಧಿಕಾರಿಗಳಿಗೆ ಹಾಗೂ ಸಂಬಂಧಿಸಿದ ಉಪವಿಭಾಗಧಿಕಾರಿಗಳಿಗೆ ಮತ್ತು ತಹಶೀಲ್ದಾರರವರಿಗೆ ಕ್ರಮವಹಿಸುವಂತೆ ತಿಳಿಸಿರುತ್ತಾರೆ. |
| ಉ) | ಶ್ರೀ ಟಿ .ಜಿ ಶ್ರೀನಿವಾಸಲು ರವರು ದಿನಾಂಕ:17.05.1955 ರಲ್ಲಿ ಶಿಕ್ಷಣ ಇಲಾಖೆಗೆ 50 ಎಕರೆ 26 ಗುಂಟೆ ಜಮೀನು ನೀಡಿರುವುದು ನಿಜವೇ? (ಸಂಪೂರ್ಣ ಮಾಹಿತಿ ನೀಡುವುದು) | ಹೌದು.<br><br>1955 ನೇ ಇಸವಿಯಲ್ಲಿ ದಿನಾಂಕ:17.12.1955 ರಲ್ಲಿ ಶ್ರೀ ಶ್ರೀನಿವಾಸಲು ಎಂಬುವವರು ಶಾಲಾ ಶಿಕ್ಷಣ ಇಲಾಖೆಗೆ 50.26 ಎಕರೆ ಜಮೀನನ್ನು ದಾನವಾಗಿ ಉಪನೋಂದಣಾಧಿಕಾರಿಗಳು ಮಾಲೂರು ಕಛೇರಿಯಲ್ಲಿ ದಸ್ತಾವೇಜಿನ ನಂ:1785/55-56, ದಿನಾಂಕ:06.08.1955 ರಂದು ದಾನ ಪತ್ರ ಮಾಡಿಕೊಟ್ಟಿರುತ್ತಾರೆ. |

**ಇಪಿ 20 ಎಂಸಿಡಿ 2026**

**(ಎಸ್. ಮಧು ಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**